**ಕರ್ನಾಟಕ ಸರ್ಕಾರ**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.875/2018**

ಪಿ.ಡಬ್ಲ್ಯೂ: 2

ಸಿ.ಡಬ್ಲ್ಯೂ: 3

ಸಾಕ್ಷಿದಾರರ **ಹೆಸರು** : ರಾಧ

ಗಂಡನ **ಹೆಸರು** : ಕುಮಾರ

**ವಯಸ್ಸು** : **34 ವರ್ಷ**

**ಉದ್ಯೋಗ** : ಗೃಹಿಣಿ

**ವಾಸಸ್ಥಳ** : ಲಿಂಗದಹಳ್ಳಿ ಗ್ರಾಮ

**ದಿನಾಂಕ: 05-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ನಮ್ಮ ಸಂಬಂಧಿಕರು. ಆರೋಪಿಗಳು ಚಾಸಾ-1 ಹಾಗೂ ನನಗೆ ಯಾವುದೇ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿರುವುದಿಲ್ಲ, ಚಾಸಾ-1 ರವರ ಮನೆಯ ಒಳಗೆ ನುಗ್ಗಿ ಚಾಸಾ-1 ಮತ್ತು ನನ್ನ ಮೇಲೆ ಯಾವುದೇ ಹಲ್ಲೆ ಮಾಡಿರುವುದಿಲ್ಲ ಹಾಗೂ ಯಾವುದೇ ರೀತಿಯ ಕೊಲೆ ಬೆದರಿಕೆ ಹಾಕಿರುವುದಿಲ್ಲ. ಆರೋಪಿಗಳಿಂದ ನಮಗೆ ಯಾವುದೇ ರೀತಿಯ ತೊಂದರೆಯಾಗಿರುವುದಿಲ್ಲ. ನಾನು ಈ ಘಟನೆಯನ್ನು ನನ್ನ ಕಣ್ಣಾರೆ ಕಂಡಿರುವುದಿಲ್ಲ. ಈ ಪ್ರಕರಣದ ಸಂಬಂಧ ಬೇರೆ ಏನೂ ಗೊತ್ತಿರುವುದಿಲ್ಲ.

**( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು:** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕ: **27-05-2018** ರಂದು ಮಧ್ಯಾಹ್ನ **1-00** ಗಂಟೆ ಸಮಯದಲ್ಲಿ ಚಾಸಾ-1 ರವರ ಗಂಡನಾದ ರಾಮ್ ರಾಜ್ ರವರ ಅಂತ್ಯಕ್ರಿಯೆಯನ್ನು ಮುಗಿಸಿಕೊಂಡು ಮನೆಗೆ ಬಂದಾಗ ಆರೋಪಿತರು ಅಕ್ರಮ ಕೂಟ ಕಟ್ಟಿಕೊಂಡು ಮನೆಗೆ ಅತೀಕ್ರಮ ಪ್ರವೇಶ ಮಾಡಿ ಚಾಸಾ-1 ರವರಿಗೂ ಹಾಗೂ ನನಗೆ, ಚಾಸಾ-2 ಮತ್ತು 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿರುತ್ತಾರೆಂದರೆ ಸರಿಯಲ್ಲ. ಆರೋಪಿತರು ನನಗೂ ಹಾಗೂ ಚಾಸಾ-1, 2 ಮತ್ತು 4 ರವರಿಗೆ

ಕೈಗಳಿಂದ ಹೊಡೆದು ನೋವುಂಟು ಮಾಡಿರುತ್ತಾರೆಂದರೆ ಸರಿಯಲ್ಲ. 5 ರಿಂದ 7ನೇ ಆರೋಪಿತರು ನನಗೂ ಹಾಗೂ 2 ಮತ್ತು 4 ರವರಿಗೆರವರಿಗೆ ಕೈಗಳಿಂದ ಹೊಡೆದು ಬಟ್ಟೆಯನ್ನು ಹಿಡಿದು ಎಳೆದಾಡಿ ಹರಿದು ಹಾಕಿ ಸಾಮಾನ್ಯ ಸ್ವರೂಪದ ಗಾಯವುಂಟು ಮಾಡಿರುತ್ತಾರೆಂದರೆ ಸರಿಯಲ್ಲ. ಆರೋಪಿತರು ನನಗೂ ಹಾಗೂ ಚಾಸಾ-1, 2 ಮತ್ತು 4 ರವರಿಗೆ ನಿಮ್ಮನ್ನು ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆಂದರೆ ಸರಿಯಲ್ಲ.

ದಿನಾಂಕಃ 29-05-2018 ರಂದು - - - - ಪುನಃ ನೋಡಿದರೆ ಗುರುತಿಸುತ್ತೇನೆಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯ ಅಲ್ಲಗೆಳೆದ ಹೇಳಿಕೆಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು

ನಾವು ಮತ್ತು ಆರೋಪಿತರು ಈ ಪ್ರಕರಣವನ್ನು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ನಾವು ಮತ್ತು ಆರೋಪಿತರು ಈ ಪ್ರಕರಣವನ್ನು ರಾಜಿ ಮಾಡಿಕೊಂಡ ಕಾರಣ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ.**

ಪಾಟೀ ಸವಾಲು ಇರುವುದಿಲ್ಲ

**ಮರುವಿಚಾರಣೆಃ** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**